## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 116 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11/08/2025 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಕ್ಟೋರಿಯಾ, ಬೌರಿಂಗ್ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಗಳಂತಹ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಒತ್ತಡ ದೀರ್ಘ ಕಾಯುವ ಸಮಯ ಮತ್ತು ಸರಿಯಾದ ಚಿಕಿತ್ಸೆಯ ಕೊರತೆ ಕಂಡುಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು; | ಕೆ.ಸಿ. ಜನರಲ್ ಆಸ್ಪತ್ರೆಗೆ ಹೊರ ಮತ್ತು ಒಳರೋಗಿಗಳಾಗಿ ಬರುವವರಿಗೆ ಆಸ್ಪತ್ರೆಯಲ್ಲಿ ಕ್ಯೂ.ಆರ್ ಕೋಡ್ ವ್ಯವಸ್ಥೆಯ ಮುಖಾಂತರ ಹೊರರೋಗಿ ಚೀಟಿ ವಿತರಿಸುವ ಮೂಲಕ ಒತ್ತಡ, ದೀರ್ಘ ಕಾಯುವ ಸಮಯವನ್ನು ತಗ್ಗಿಸಿ ಸಮಯದಲ್ಲಿ ಚಿಕಿತ್ಸೆ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ.<br><br>ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆಗೆ ರಾಜ್ಯದ ನಾನಾ ಭಾಗಗಳಿಂದಲ್ಲದೆ ನೆರೆ ರಾಜ್ಯಗಳಾದ ಆಂದ್ರಪ್ರದೇಶ, ತಮಿಳುನಾಡು ರಾಜ್ಯಗಳಿಂದಲೂ ಸಹ ವಿವಿಧ ಖಾಯಿಲೆಗಳ ಚಿಕಿತ್ಸಗೆ ಬರುತ್ತಿರುತ್ತಾರೆ. ಸದರಿ ರೋಗಿಗಳಿಗೆ ಚಿಕಿತ್ಸೆಯಲ್ಲಿ ಯಾವುದೇ ವ್ಯತ್ಯಾಸವಾಗದಂತೆ ಕ್ರಮವಹಿಸಲಾಗುತ್ತಿದೆ. ಪ್ರಸ್ತುತ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ರೋಗಿಗಳ ಚಿಕಿತ್ಸಗೆ ದೀರ್ಘ ಸಮಯ ಕಾಯುವ ಸನ್ನಿವೇಶ ಉದ್ಭವಿಸಿರುವುದಿಲ್ಲ ಹಾಗೂ ಯಾವುದೇ ಚಿಕಿತ್ಸೆ ಕೊರತೆ ಬಗ್ಗೆ ಯಾವುದೇ ರೋಗಿಗಳು ದೂರನ್ನು ದಾಖಲಿಸಿರುವುದಿಲ್ಲ. ಚಿಕಿತ್ಸೆ ನೀಡಿದ ನಂತರ ರೋಗಿಗಳಿಗೆ ಅವಶ್ಯವಿದ್ದಲ್ಲಿ ಆಸ್ಪತ್ರೆಯಲ್ಲಿ ದಾಖಲುಗೊಳಿಸಿ ಹೆಚ್ಚಿನ ಚಿಕಿತ್ಸೆ ನೀಡಲಾಗುತ್ತಿದೆ.<br><br>ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ ಹಾಗೂ ಶಿವಾಜಿನಗರದ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯುತ್ತಿದ್ದು, ಚಿಕಿತ್ಸೆಯಲ್ಲಿ ಯಾವುದೇ ಕೊರತೆ ಕಂಡುಬಂದಿರುವುದಿಲ್ಲ. |
| ಆ) | ವೈದ್ಯರು, ನರ್ಸ್‌ಗಳು ಮತ್ತು ಪ್ಯಾರಾಮೆಡಿಕಲ್ ಸಿಬ್ಬಂದಿಯ ಕೊರತೆಯ ಕುರಿತು ಇಲಾಖೆಯ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೊರತೆಯ ಪ್ರಮಾಣವೆಷ್ಟು; | **ಬಂದಿದೆ**<br><br>ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಮಂಜೂರಾದ, ಕಾರ್ಯನಿರತ ಮತ್ತು ಖಾಲಿ ಇರುವ ವೈದ್ಯಕೀಯ, ಅರೆ ವೈದ್ಯಕೀಯ ಸಿಬ್ಬಂದಿಗಳ ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ.<br><br>ಖಾಲಿ ಹುದ್ದೆಗಳ ಭರ್ತಿಗೆ ಗುತ್ತಿಗೆ/ಹೊರಗುತ್ತಿಗೆ ಮೇಲೆ ಭರ್ತಿ ಮಾಡುವ ಮೂಲಕ ಸಾರ್ವಜನಿಕರಿಗೆ ವೈದ್ಯಕೀಯ ಸೇವೆಯಲ್ಲಿ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತಿದೆ.<br><br>ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆಗೆ ಮಂಜೂರಾದ ಹುದ್ದೆಗಳಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದ ಅನುಮೋದನೆಯಂತೆ ವೈದ್ಯರುಗಳನ್ನು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿಗಳನ್ನು ಅಗತ್ಯಕ್ಕೆ ತಕ್ಕಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಸೇವೆಯನ್ನು ಪಡೆಯಲಾಗುತ್ತಿದೆ. |

| | | |
|---|---|---|
| | | ಬೌರಿಂಗ್ ಆಸ್ಪತ್ರೆಯಲ್ಲಿ ವೈದ್ಯರು, ನರ್ಸ್‌ಗಳು ಮತ್ತು ಪ್ಯಾರಾ ಮೆಡಿಕಲ್ ಸಿಬ್ಬಂದಿಯ ಕೊರತೆ ಇರುವುದಿಲ್ಲ. ಖಾಲಿ ಇರುವ ಹುದ್ದೆಗಳನ್ನು ಸರ್ಕಾರದ ಆದೇಶದ ಪ್ರಕಾರ ಗುತ್ತಿಗೆ ಆಧಾರದ ಮೇಲೆ ಭರ್ತಿಯಾಗುತ್ತಿವೆ. |
| ಇ) | ಕೊಳಚೆ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮೊಬೈಲ್ ಆರೋಗ್ಯ ಕ್ಲಿನಿಕ್‌ಗಳು ಅಥವಾ ಔಟ್ರೀಚ್ ಬಿ.ಬಿ.ಎಂ.ಪಿ., ಜೊತೆಗೂಡಿ ತಪಾಸಣೆ ಕಾರ್ಯಕ್ರಮಗಳಿವೆಯೇ; ಆಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು; | ಬೆಂಗಳೂರು ನಗರ ಜಿಲ್ಲೆಯಲ್ಲಿ ಅಸಾಂಕ್ರಾಮಿಕ ರೋಗಗಳ ಕಾರ್ಯಕ್ರಮದಡಿಯಲ್ಲಿ 5 ಸಮುದಾಯ ಆರೋಗ್ಯ ಕೇಂದ್ರ, 03 ತಾಲ್ಲೂಕು ಆಸ್ಪತ್ರೆಗಳು ಮತ್ತು 01 ಜಿಲ್ಲಾ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿ ಎನ್.ಸಿ.ಡಿ ಘಟಕವನ್ನು ಸ್ಥಾಪಿಸಲಾಗಿರುತ್ತದೆ.<br>1. ಬೆಂಗಳೂರು ನಗರದ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ನಮ್ಮ ಕ್ಲಿನಿಕ್‌ಗಳಲ್ಲಿ ಅಸಾಂಕ್ರಾಮಿಕ ರೋಗಗಳ ತಪಾಸಣೆಯನ್ನು ನಡೆಸಲಾಗುತ್ತಿದೆ.<br>2. ಬೆಂಗಳೂರು ನಗರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳು(CHO), ಪ್ರಾಥಮಿಕ ಸುರಕ್ಷ ಆರೋಗ್ಯ ಅಧಿಕಾರಿಗಳು(PHCO) ಮತ್ತು ಆಶಾ ಕಾರ್ಯಕರ್ತೆಯರು ಗೃಹ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ಎಲ್ಲಾ ಆಯುಷ್ಮಾನ್ ಆರೋಗ್ಯ ಕೇಂದ್ರಗಳ ಮೂಲಕ ಅಸಾಂಕ್ರಾಮಿಕ (NCD) ರೋಗಗಳ ತಪಾಸಣೆಯನ್ನು ಮಾಡಲು ಗೃಹ ಆರೋಗ್ಯ ಕಾರ್ಯಕ್ರಮದ ಯೋಜನೆಯನ್ನು ಸಂಪೂರ್ಣವಾಗಿ ವಿಸ್ತರಿಸಲಾಗಿದೆ.<br>3. ಉಪ ಕೇಂದ್ರಗಳು/ಆಯುಷ್ಮಾನ್ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ಪ್ರತಿ ಮಂಗಳವಾರ ಸಮುದಾಯ ಆರೋಗ್ಯಾಧಿಕಾರಿಗಳಿಂದ (CHO) ಅಸಾಂಕ್ರಾಮಿಕ (NCD) ತಪಾಸಣೆ ನಡೆಸಲಾಗುತ್ತದೆ.<br><br>ಬೆಂಗಳೂರು ನಗರ ಜಿಲ್ಲೆಯ ನಗರದ ವ್ಯಾಪ್ತಿಯ ಹೊರವಲಯದ ಪ್ರದೇಶಗಳಲ್ಲಿನ 9 ಅಸಾಂಕ್ರಾಮಿಕ(NCD) ಕ್ಲಿನಿಕ್ ಗಳಲ್ಲಿ ಸಿಬ್ಬಂದಿಗಳಿಂದ ಪ್ರತ್ಯೇಕವಾಗಿ ವಾರಕ್ಕೆ ಎರಡು ಬಾರಿ ಎನ್.ಸಿ.ಡಿ ಶಿಬಿರಗಳನ್ನು ಆಯೋಜಿಸಿ ಎಲ್ಲಾ ಅಸಾಂಕ್ರಾಮಿಕ ರೋಗಗಳಿಗೆ ತಪಾಸಣೆ ನಡೆಸಲಾಗುತ್ತದೆ.<br><br>ಸಮುದಾಯ ವೈದ್ಯಶಾಸ್ತ್ರ ವಿಭಾಗದಿಂದ NCD (Non Communicable Diseases) ತಪಾಸಣೆಯನ್ನು ಸಿದ್ದಯ್ಯ ರಸ್ತೆಯಲ್ಲಿರುವ ಬಿ.ಬಿ.ಎಂ.ಪಿ., ಸಹಯೋಗದೊಂದಿಗೆ ಸಿದ್ದಯ್ಯ ರಸ್ತೆ ರೆಫರಲ್ ಆಸ್ಪತ್ರೆಯಲ್ಲಿರುವ ಸಮುದಾಯಕ್ಕೆ ಔಟ್ರೀಚ್ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿರುತ್ತದೆ. |
| ಈ) | ಬೆಂಗಳೂರು ನಗರದಲ್ಲಿ NCD's (Non communicable Diseases) ತಪಾಸಣೆಯನ್ನು ಹೇಗೆ ವಿಸ್ತರಿಸಲಾಗುತ್ತಿದೆ; (ವಿವರ ನೀಡುವುದು). | |
| ಉ) | ಔಷಧ ಸರಬರಾಜಿನಲ್ಲಿ ಗುಣಮಟ್ಟ ಲೋಪದೋಷ ಕಂಡುಬಂದಿದೆಯೇ; ಬಂದಿದ್ದಲ್ಲಿ, ಗುಣಮಟ್ಟ ಖಾತ್ರಿಪಡಿಸಲು ಇಲಾಖೆಯು ಹೇಗೆ ಕಾರ್ಯನಿರ್ವಹಿಸುತ್ತಿದೆ? (ವಿವರ ನೀಡುವುದು). | ಕೆ.ಸಿ. ಜೆನರಲ್ ಆಸ್ಪತ್ರೆಗೆ ಕೆ.ಎಸ್.ಎಂ.ಎಸ್.ಸಿ.ಎಲ್ ವತಿಯಿಂದ ಸರಬರಾಜಾದ ಔಷಧಿಗಳ ಗುಣಮಟ್ಟ ಲೋಪದೋಷದ ಬಗ್ಗೆ ವರದಿ ಬಂದಲ್ಲಿ ಅಂತಹ ಔಷಧಿಗಳನ್ನು ರೋಗಿಗಳಿಗೆ ನೀಡದೆ ತಡೆಹಿಡಿದು ಹಿಂದಿರುಗಿಸಲು ಕ್ರಮವಹಿಸಲಾಗುತ್ತದೆ.<br><br>ಕೆ.ಎಸ್.ಎಂ.ಎಸ್.ಸಿ.ಎಲ್. ಸಂಸ್ಥೆಯು KTPP ಕಾಯ್ದೆಯ ಅನುಸಾರ ಟೆಂಡರ್ ಮೂಲಕ ಅಗತ್ಯವಿರುವ ಔಷಧಗಳನ್ನು ಖರೀದಿಸಿ ಆರೋಗ್ಯ ಸಂಸ್ಥೆಗಳ ಬೇಡಿಕೆಯಂತೆ ಸಂಸ್ಥೆವಾರು ಪೂರೈಸಲಾಗುತ್ತದೆ. ಔಷಧಗಳನ್ನು ಸರಬರಾಜು ಮಾಡುವಾಗ In-house NABL Certificate ಹೊಂದಿರುವ ಲ್ಯಾಬ್‌ಗಳು ನೀಡಿರುವ ಔಷಧಗಳ ಗುಣಮಟ್ಟದ ವರದಿಗಳನ್ನು ಸಲ್ಲಿಸುತ್ತಾರೆ.<br><br>ಮುಂದುವರೆದು ಸರಬರಾಜಾಗಿರುವ ಎಲ್ಲಾ ಬ್ಯಾಚ್‌ನ ಔಷಧವು Aushada QC module ಮುಖಾಂತರವಾಗಿ 5 ಔಷಧ ಉಗ್ರಾಣಗಳಿಂದ ಕೆ.ಎಸ್.ಎಂ.ಎಸ್.ಸಿ.ಎಲ್ ಗುಣಕೋಶ ವಿಭಾಗಕ್ಕೆ ಔಷಧ ಮಾದರಿಗಳನ್ನು ಗುಣಮಟ್ಟ ಪರೀಕ್ಷೆಗಾಗಿ ಸಲ್ಲಿಸುತ್ತಾರೆ. Aushada QC module ಮೂಲಕ 1 ಔಷಧ ಮಾದರಿಯನ್ನು ಆಯ್ಕೆಮಾಡಿ NABL Certificate empanelled ಲ್ಯಾಬ್‌ಗೆ ಗುಣಮಟ್ಟ ಪರೀಕ್ಷೆಗಾಗಿ ಕಳುಹಿಸಿಕೊಡಲಾಗುತ್ತದೆ, ಸದರಿ ಔಷದಗಳ ಲ್ಯಾಬ್ ವರದಿಗಳನ್ನು ಪರೀಕ್ಷಿಸಿ ಔಷಧಗಳನ್ನು ಬಳಕೆಗೆ ಅನುಮತಿ ನೀಡಲಾಗುತ್ತದೆ. |

| | | |
|---|---|---|
| | | ಕೇಂದ್ರ ಮತ್ತು ರಾಜ್ಯ ಸರ್ಕಾರದ ಔಷಧ ನಿಯಂತ್ರಣ ಇಲಾಖೆಯ ಔಷಧ ಪರಿವೀಕ್ಷಕರು Random ಆಗಿ ಔಷಧಗಳ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸುತ್ತಾರೆ. ಯಾವ ಬ್ಯಾಚ್‌ಗಳ ಔಷಧವು ಪರೀಕ್ಷೆಯಲ್ಲಿ ಉತ್ತಮಗುಣಮಟ್ಟವಲ್ಲವೆಂದು ಘೋಷಣೆ ಆಗುತ್ತದೋ ಅಂತಹ ಬ್ಯಾಚ್‌ನ ಔಷಧವನ್ನು ಬಳಕೆ ಮಾಡದಂತೆ Aushada ತಂತ್ರಾಂಶದಲ್ಲಿ ಫ್ರೀಜ್ ಮಾಡಿ ತಡೆಹಿಡಿಯಲಾಗುತ್ತದೆ.<br><br>ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಅಧೀನದ ಆರೋಗ್ಯ ಸಂಸ್ಥೆಗೆ ಟೆಂಡರ್ ಮೂಲಕ ಹಾಗೂ ದರ ಗುತ್ತಿಗೆಯ ಮೂಲಕ ಔಷಧಗಳನ್ನು ಸರಬರಾಜು ಪಡೆಯಲಾಗುತ್ತಿದ್ದು, ಉತ್ತಮ ಗುಣಮಟ್ಟವುಳ್ಳ ಔಷಧ ಸರಬರಾಜನ್ನು ವಿಕ್ಟೋರಿಯಾ ಆಸ್ಪತ್ರೆ, ವಾಣಿ ವಿಲಾಸ್ ಆಸ್ಪತ್ರೆ, ಮಿಂಟೋ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಟ್ರಾಮಾ ಕೇರ್ ಕೇಂದ್ರಗಳಲ್ಲಿನ ಉಗ್ರಾಣಗಳಲ್ಲೂ ಔಷಧಕಾರರುಗಳು ಪರೀಕ್ಷಿಸಿ ಔಷಧಗಳನ್ನು ಸ್ವೀಕರಿಸಲಾಗುತ್ತಿದೆ.<br><br>ಬೌರಿಂಗ್ ಆಸ್ಪತ್ರೆಗೆ ಸರಬರಾಜು ಔಷಧಗಳ ಗುಣಮಟ್ಟಗಳನ್ನು ಖಾತ್ರಿಪಡಿಸಿಕೊಳ್ಳಲು ಔಷಧಗಳ ಸ್ಯಾಂಪಲ್‌ಗಳನ್ನು ಔಷಧ ನಿಯಂತ್ರಣ ಇಲಾಖೆಗೆ ಪರೀಕ್ಷೆಗೆ ಕಳುಹಿಸಿ, ಪರೀಕ್ಷಿಸಿದ ನಂತರ ರೋಗಿಗಳ ಚಿಕಿತ್ಸೆಗೆ ಬಳಸಲಾಗುತ್ತದೆ. |

**ಸಂಖ್ಯೆ: ಆಕುಕ 59 ಹೆಚ್‌ಎಸ್‌ಡಿ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅನುಬಂಧ(2)

## ಕೆ.ಸಿ.ಜನರಲ್ ಆಸ್ಪತ್ರೆ, ಬೆಂಗಳೂರು.

| ಕ್ರ.ಸಂ. | ಹುದ್ದೆ | ಮಂಜೂರಾತಿ | ಕರ್ತವ್ಯ ನಿರತ | ಖಾಲಿ |
|---|---|---|---|---|
| 1 | ವೈದ್ಯಕೀಯ ಅಧೀಕ್ಷಕರು | 1 | 1 | 0 |
| 2 | ಸ್ಥಾನೀಯ ವೈದ್ಯಾಧಿಕಾರಿಗಳು | 1 | 0 | 1 |
| 3 | ಓ.ಪಿ.ಡಿ. ಸರ್ಜನ್ | 1 | 0 | 1 |
| | ಹಿರಿಯ ತಜ್ಞರುಗಳು:- | | | |
| 4 | ಅಸ್ಥಿಚಿಕಿತ್ಸಾ ತಜ್ಞರು | 3 | 3 | 0 |
| 5 | ಶಸ್ತ್ರಚಿಕಿತ್ಸಾ ತಜ್ಞರು | 6 | 5 | 1 |
| 6 | ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರು | 5 | 5 | 0 |
| 7 | ಫಿಸಿಷಿಯನ್ | 4 | 4 | 0 |
| 8 | ಮಕ್ಕಳ ತಜ್ಞರು | 3 | 3 | 0 |
| 9 | ಅರಿವಳಿಕೆ ತಜ್ಞರು | 3 | 2 | 1 |
| 10 | ಇ.ಎನ್.ಟಿ. | 2 | 2 | 0 |
| 11 | ನೇತ್ರ ತಜ್ಞರು | 3 | 3 | 0 |
| 12 | ಪೆಥಾಲಜಿಸ್ಟ್ | 1 | 1 | 0 |
| 13 | ರಕ್ತನಿಧಿ ಅಧಿಕಾರಿ (ಪೆಥಾಲಜಿಸ್ಟ್) | 1 | 1 | 0 |
| 14 | ಮೈಕ್ರೋಬಯಾಲಜಿಸ್ಟ್ | 2 | 1 | 1 |
| 15 | ಚರ್ಮರೋಗ ತಜ್ಞರು | 1 | 1 | 0 |
| 16 | ಮಾನಸಿಕ ರೋಗ ತಜ್ಞರು | 1 | 1 | 0 |
| 17 | ದಂತ ತಜ್ಞರು | 2 | 2 | 0 |
| 18 | ರೇಡಿಯಾಲಜಿಸ್ಟ್ | 1 | 1 | 0 |
| 19 | ಸಿ.ಎಂ.ಓ / ಎಸ್.ಎಂ.ಓ | 11 | 3 | 8 |
| | ಒಟ್ಟು | **52** | **39** | **13** |

| ಕ್ರ.ಸಂ. | ಹುದ್ದೆ | ಮಂಜೂರಾತಿ | ಕರ್ತವ್ಯ ನಿರತ | ಖಾಲಿ |
|---|---|---|---|---|
| | ಗ್ರೂಪ್ "ಬಿ" | | | |
| 1 | ಸಹಾಯಕ ಆಡಳಿತಾಧಿಕಾರಿಗಳು | 1 | 1 | 0 |
| 2 | ಶುಶ್ರೂಷಕ ಅಧೀಕ್ಷಕರು ದರ್ಜೆ-1 | 1 | 1 | 0 |
| 3 | ಮನೋಸಾಮಾಜಿಕ ತಜ್ಞರು | 1 | 1 | 0 |
| 4 | ಕ್ಲಿನಿಕಲ್ ಸೈಕಾಲಜಿಸ್ಟ್ | 1 | 1 | 0 |
| | **ಒಟ್ಟು** | **4** | **4** | **0** |
| | ಗ್ರೂಪ್ "ಸಿ" | | | |
| 1 | ಕಛೇರಿ ಅಧೀಕ್ಷಕರು | 1 | 1 | 0 |
| 2 | ಪ್ರಥಮ ದರ್ಜೆ ಸಹಾಯಕರು | 6 | 2 | 4 |
| 3 | ದ್ವಿತೀಯ ದರ್ಜೆ ಸಹಾಯಕರು | [illegible] | [illegible] | [illegible] |
| 4 | ಬೆರಳಚ್ಚುಗಾರರು | 1 | 0 | 1 |
| 5 | ಬೆರಳಚ್ಚುಗಾರರು ಹಾಗೂ ಸಹಾಯಕರು | 2 | 0 | 2 |
| 6 | ಶುಶ್ರೂಷಕ ಅಧೀಕ್ಷಕರು ದರ್ಜೆ-2 | 5 | 1 | 4 |
| 7 | ಹಿರಿಯ ಶುಶ್ರೂಷಕ ಅಧಿಕಾರಿಗಳು | 11 | 1 | 10 |
| 8 | ಶುಶ್ರೂಷಕ ಅಧಿಕಾರಿಗಳು | 95 | 74 | 21 |
| 9 | ಮಹಿಳಾ ಆರೋಗ್ಯ ಸಹಾಯಕಿ | 9 | 1 | 8 |

| | | | | |
|---|---|---|---|---|
| 10 | ಹಿರಿಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ | 3 | 1 | 2 |
| 11 | ಕಿರಿಯ ಪ್ರಯೋಗಶಾಲಾ ಟೆಕ್ನಾಲಜಿಸ್ಟ್ | 3 | 2 | 1 |
| 12 | ಹಿರಿಯ ಫಾರ್ಮಾಸಿ ಅಧಿಕಾರಿ | 3 | 2 | 1 |
| 13 | ಕಿರಿಯ ಫಾರ್ಮಾಸಿ ಅಧಿಕಾರಿ | 3 | 3 | 0 |
| 14 | ಎಕ್ಸರೆ ಟೆಕ್ನಾಲಜಿಸ್ಟ್ | 3 | 3 | 0 |
| 15 | ಮುಖ್ಯ ನೇತ್ರಾಧಿಕಾರಿ | 1 | 0 | 1 |
| 16 | ನೇತ್ರಾಧಿಕಾರಿ | 2 | 1 | 1 |
| 17 | ವೈದ್ಯಕೀಯ ದಾಖಲಾತಿ ಟೆಕ್ನಾಲಜಿಸ್ಟ್ | 1 | 0 | 1 |
| 18 | ವೈದ್ಯಕೀಯ ಮೇಲ್ವಿಚಾರಕರು | 1 | 0 | 1 |
| 19 | ಇ.ಸಿ.ಜಿ. ಟೆಕ್ನಾಲಜಿಸ್ಟ್ | 1 | 0 | 1 |
| 20 | ವಿದ್ಯುತ್ ತಂತ್ರಜ್ಞರು | 1 | 1 | 0 |
| 21 | ವಾಹನ ಚಾಲಕರು | 2 | 0 | 2 |
| 22 | ಸಾಮಾಜಿಕ ಕಾರ್ಯಕರ್ತರು | 6 | 1 | 5 |
| 23 | ಫಿಜಿಯೋಥೆರಪಿಸ್ಟ್ | 1 | 1 | 0 |
| 24 | ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ | 1 | 1 | 0 |
| | **ಒಟ್ಟು** | **169** | **101** | **68** |
| 25 | ಗ್ರೂಪ್ "ಡಿ" | 132 | 21 | 111 |
| | **ಒಟ್ಟು** | **132** | **21** | **111** |

**ಘೋಷ್ವಾರೆ (Abstract) ಎ ಬಿ ಸಿ ಡಿ ವೃಂದದ ವಿವರ:–**

| ಕ್ರ.ಸಂ. | ವೃಂದ | ಮಂಜೂರಾತಿ | ಕಾರ್ಯನಿರತ | ಖಾಲಿ |
|---|---|---|---|---|
| 1 | ಎ | 52 | 39 | 13 |
| 2 | ಬಿ | 4 | 4 | 0 |
| 3 | ಸಿ | 169 | 101 | 68 |
| 4 | ಡಿ | 131 | 21 | 111 |

Medical Superintendent
Govt. K. C. General Hospita
Malleswaram, Bengaluru-03